6//

# ಕರ್ನಾಟಕ ವಿಧಾನ ಪರಿಷತ್ತು

1. ಸದಸ್ಯರ ಹೆಸರು : ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
2. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 372 (497)
3. ಉತ್ತರಿಸಬೇಕಾದ ದಿನಾಂಕ : 12.12.2024
4. ಉತ್ತರಿಸುವ ಸಚಿವರು : ಮುಖ್ಯಮಂತ್ರಿ

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಜಿಲ್ಲಾ ವೃಂದದ ಗ್ರೂಪ್ -ಸಿ ಹುದ್ದೆಯನ್ನು ಉನ್ನತಿಕರಿಸಿ ಗ್ರೂಪ್ -ಬಿ (ಕಿರಿಯ ಶ್ರೇಣಿ) ವೃಂದವನ್ನು ಮಾಡಬೇಕಾದರೆ, ಈ ಜಿಲ್ಲಾ ವೃಂದದ ಹುದ್ದೆಯನ್ನು ರಾಜ್ಯ ವೃಂದದ ಹುದ್ದೆಯನ್ನಾಗಿ ಮಾರ್ಪಾಟು ಮಾಡುವುದು ಕಡ್ಡಾಯವೇ; (ಪೂರಕ ಸರ್ಕಾರದ ಸುತ್ತೋಲೆ/ನಿಯಮಗಳ ಪ್ರತಿ ನೀಡುವುದು) | ಜಿಲ್ಲಾ ವೃಂದದ ಹುದ್ದೆಯನ್ನು ರಾಜ್ಯ ವೃಂದದ ಹುದ್ದೆಯನ್ನಾಗಿ ಮಾರ್ಪಾಟು ಮಾಡುವ ಕುರಿತು ಸರ್ಕಾರದಿಂದ ಯಾವುದೇ ನಿರ್ದಿಷ್ಟ ಸೂಚನೆಗಳನ್ನು ಹೊರಡಿಸಿರುವುದಿಲ್ಲ.<br><br>ಇಂತಹ ವಿಷಯಗಳಲ್ಲಿ ಆಡಳಿತಾತ್ಮಕ ಹಿತದೃಷ್ಠಿಯಿಂದ ಇಲಾಖೆಗಳು ಸೂಕ್ತ ನಿರ್ಧಾರ ಕೈಗೊಳ್ಳಬೇಕಾಗುತ್ತದೆ. |
| ಆ) | ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ 1978ರಡಿಯ ಅಧಿಕಾರವನ್ನು ಚಲಾಯಿಸಿ ಸರ್ಕಾರವು ರಚಿಸುವ ನಿಯಮಗಳನ್ನು/ತಿದ್ದುಪಡಿ ನಿಯಮಗಳನ್ನು ಅಧಿಸೂಚನೆ ಮುಖಾಂತರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸದೆ, ಅಂತಿಮಗೊಳಿಸಿ ಜಾರಿಗೊಳಿಸಬಹುದೆ; ಹೌದಾದಲ್ಲಿ ಈ ಕುರಿತು ಸರ್ಕಾರದಲ್ಲಿರುವ ನಿಯಮಗಳ/ಆದೇಶಗಳ ಪ್ರತಿ ನೀಡುವುದು; | ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ 1978ರ ಸೆಕ್ಷನ್ 3(2)(ಎ) ರಂತೆ ಸರ್ಕಾರವು ರಚಿಸುವ ನಿಯಮಗಳನ್ನು/ತಿದ್ದುಪಡಿ ನಿಯಮಗಳನ್ನು ಅಧಿಸೂಚನೆ ಮೂಲಕ ಅಂತಿಮಗೊಳಿಸಿ ಪ್ರಕಟಿಸಿದ ನಂತರ ಮಾತ್ರ ಅವು ಜಾರಿಗೆ ಬರುತ್ತವೆ. |
| ಇ) | ಕರಡು ನಿಯಮಗಳಿಗೆ ಬಂದಂತಹ ಆಕ್ಷೇಪಣೆಗಳನ್ನು ತಿರಸ್ಕರಿಸಿದಲ್ಲಿ, ಇವುಗಳ ಕಾರಣಗಳನ್ನು ಆಕ್ಷೇಪಣೆದಾರರಿಗೆ ನೀಡದೇ, ಸದರಿ ನಿಯಮಗಳನ್ನು ಅಂತಿಮಗೊಳಿಸಬಹುದೆ; ಹೌದಾದಲ್ಲಿ ಈ ಕುರಿತು ಸರ್ಕಾರದಲ್ಲಿರುವ ನಿಯಮಗಳ/ ನ್ಯಾಯಾಲಯದ ಆದೇಶಗಳ ಪ್ರತಿ ನೀಡುವುದು; | ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ 1978ರ ಸೆಕ್ಷನ್ 3(2)(ಎ) ರಂತೆ ಕರಡು ನಿಯಮಗಳನ್ನು ಅಂತಿಮಗೊಳಿಸುವ ಪೂರ್ವದಲ್ಲಿ ಈ ಸಂಬಂಧ ಸ್ವೀಕೃತವಾಗಿರುವ ಆಕ್ಷೇಪಣೆ/ಸಲಹೆಗಳನ್ನು ಸರ್ಕಾರವು ಪರಿಗಣಿಸಿ (consider) ತರುವಾಯ ಅಂತಿಮ ನಿಯಮಗಳನ್ನು ಪ್ರಕಟಿಸಬೇಕಾಗುತ್ತದೆ.<br>ಆದರೆ, ಈ ಅಧಿನಿಯಮದಲ್ಲಿ ಆಕ್ಷೇಪಣೆದಾರರಿಗೆ ಕಾರಣಗಳನ್ನು ನೀಡಲು ಉಪಬಂಧ ಕಲ್ಪಿಸಿರುವುದಿಲ್ಲ. |
| ಈ) | ಜೇಷ್ಠತಾ ಪಟ್ಟಿ ಸಿದ್ಧಪಡಿಸದೇ, ಸಕ್ಷಮ ಪ್ರಾಧಿಕಾರವು ಈ ಹುದ್ದೆಯ ನೌಕರರನ್ನು ವರ್ಗಾವಣೆ ಮಾಡಬಹುದೇ? (ನಿಯಮಗಳ /ಆದೇಶಗಳ ಪ್ರತಿ ನೀಡುವುದು) | ಜೇಷ್ಠತಾ ಪಟ್ಟಿಯನ್ನು ಆಧರಿಸಿ ವರ್ಗಾವಣೆಯನ್ನು ಮಾಡಲಾಗುವುದಿಲ್ಲ. |

ಸಂಖ್ಯೆ: ಸಿಆಸುಇ 317 ಸೇನಿಡಿ 2024

(ಸಿದ್ದರಾಮಯ್ಯ)
ಮುಖ್ಯಮಂತ್ರಿ